<u>ಇಂದು ದಿಃ **07-10-2023** ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ. ಎಚ್ ವಕೀಲರಿಂದ**

ಈ ದಾವೆಯನ್ನು ಗಂಗಾಧರಪ್ಪ ಎನ್ನುವವರು ಕೆಂಚಪ್ಪ ನ ವಿರುದ್ಧ ಸಲ್ಲಿಸಿದ್ದಾರೆ. ಗಂಗಾಧರಪ್ಪ ಕೆಂಚಪ್ಪನನ್ನು ಹೊರತು ಪಡಿಸಿ ಬೇರೆಯವರ ವಿರುದ್ಧ ದಾವೆ ಸಲ್ಲಿಸಿರುವುದಿಲ್ಲ. ಮನೆ ಮತ್ತು ಜಮೀನುಗಳಲ್ಲಿ ಸಮಪಾಲು ಮಾಡಿಕೊಡಬೇಕೆಂದು ಗಂಗಾಧರಪ್ಪ ಕೆಂಚಪ್ಪನ ವಿರುದ್ಧ ದಾವೆಯನ್ನು ಸಲ್ಲಿಸಿದ್ದಾನೆ. ಎಷ್ಟು ಜಮೀನುಗಳ ಮೇಲೆ ಪ್ರಕರಣ ದಾಖಲಿಸಿದ್ದಾನೆಂದು ನನಗೆ ಹೇಳಲು ಬರುವುದಿಲ್ಲ. ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ವಿಸ್ತೀರ್ಣ ಜಮೀನಿಗೆ ಕೇಸು ಹಾಕಿದ್ದಾನೆಂದು ನನಗೆ ಗೊತ್ತಿಲ್ಲ. ಮನೆ , ಖಣದ ಕುರಿತು ದಾವೆಯನ್ನು ಸಲ್ಲಿಸಿದ್ದಾನೆ. 2 ಮನೆಗಳ ಕುರಿತು ದಾವೆಯನ್ನು ಸಲ್ಲಿಸಿದ್ದಾನೆ. ಖಣದ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ 2 , 3 ಮತ್ತು 5 ರವರ ಪ್ರತಿವಾದಿ ಪತ್ರವನ್ನು ತೋರಿಸಲಾಗಿ ಅದಕ್ಕೆ 2 , 3 ಮತ್ತು 5 ನೇ ಪ್ರತಿವಾದಿಯವರು ಸಹಿ ಮಾಡಿದ್ದಾರೆ ಆದರೆ ನನ್ನ ಸಹಿಯನ್ನು ಬೇರೆ ದಾಖಲೆಗೆ ತೆಗೆದುಕೊಂಡಿದ್ದಾರೆಂದು ಸಾಕ್ಷಿಯು ಸ್ವಇಚ್ಚೆಯಿಂದ ಹೇಳುತ್ತಾರೆ. ಮಹದೇವಮ್ಮ ಎನ್ನುವವರು ಹೆಬ್ಬೆಟ್ಟಿನ ಗುರುತು ಹಾಕುತ್ತಾರೆಂದರೆ ಸರಿ . ನಾನು ವಕೀಲರ ಕಛೇರಿಯಲ್ಲಿ ಸಹಿ ಮಾಡಿರುತ್ತೇವೆಂದು ಸುಳ್ಳು ಹೇಳುತ್ತಿದ್ದೇವೆಂದರೆ ಸರಿಯಲ್ಲ. 1 ರಿಂದ 3 ಮತ್ತು 5 ನೇಯವರ ಪ್ರತಿವಾದಿ ಪತ್ರವನ್ನು ಅಳವಡಿಸಿಕೊಂಡಿದ್ದೇವೆಂದು ನಾನು ಮತ್ತು ನಮ್ಮ ತಾಯಿ ಹೇಳಿದ್ದರಿಂದ ಮೇಮೋವನ್ನು ಸಲ್ಲಿಸಿದ್ದೇವೆ ಎನ್ನುವುದು ಸರಿಯಲ್ಲ. 2014 ರಲ್ಲಿ ನಮ್ಮ ತಾಯಿ ಜೀವಂತ ಇದ್ದರು ಎಂದರೆ ನನಗೆ ನೆನಪಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ವಕಾಲತ್ ನಾಮೇಯನ್ನು ತೋರಿಸಲಾಗಿ ದಿಃ 21-11-2014 ರಂದು ಮಾಡಿದ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದಾರೆ. ಸದರಿ ವಕಾಲತ್ ನಾಮೇಯ ಮೇಲೆ ವಕೀಲರ ಕಛೇರಿಯಲ್ಲಿ ಸಹಿ ಮಾಡಿದ್ದೇನೆಂದರೆ ಸರಿ . ಆ ಸಮಯದಲ್ಲಿ 2 ನೇ ಪ್ರತಿವಾದಿ ಹೆಬ್ಬೆಟ್ಟಿನ ಗುರುತು ಹಾಕಿದ್ದಾರೆಂದರೆ ಸರಿ . ಅದೇ ದಿನ 1 ನೇ ಪ್ರತಿವಾದಿ , 3 ಮತ್ತು 5 ನೇ ಪ್ರತಿವಾದಿಯರು ಸಹಿ ಮಾಡಿದ್ದಾರೆಂದರೆ ಸರಿ . 1 ನೇ ಪ್ರತಿವಾದಿ ನನ್ನ ಮುಖ್ಯ ವಿಚಾರಣೆಯ 2 ನೇ ಪ್ಯಾರಾದಲ್ಲಿ ಬರೆದಂತೆ ವಿವಿಧ ದಾಖಲೆಗಳ ಮೇಲೆ ಸುಳ್ಳು ಬರೆಸಿದ್ದೇನೆಂದರೆ ಸರಿಯಲ್ಲ. ನಾನು ಮತ್ತು ನನ್ನ ಅಕ್ಕ ರುದ್ರಮ್ಮ ಒಂದೇ ಊರಿನಲ್ಲಿರುತ್ತೇವೆಂದರೆ ಸರಿ . 1 ರಿಂದ 3 ನೇ ಪ್ರತಿವಾದಿಯರು ಸಲ್ಲಿಸಿದ ಪ್ರತಿವಾದ ಪತ್ರ ನನ್ನ ಪರವಾಗಿ ಅಳವಡಿಸಿಕೊಳ್ಳುವಂತೆ ವಕೀಲರ ಮುಲಕ ಮೋಮೇವನ್ನು ಮಾತ್ರ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಆ ರೀತಿ ಬರೆಯಲು ನಾನೇ ವಕೀಲರಿಗೆ ಮಾಹಿತಿ ಕೊಟ್ಟಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಕೊಟ್ಟ ಹಕ್ಕು ಪತ್ರವನ್ನು ನಾನು ನೋಡಿರುವುದಿಲ್ಲ. ಆದರೆ ಮನೆಯಲ್ಲಿ ಇದೆ. ನಮ್ಮ ತಂದೆ ಮತ್ತು ಆತನ ಸಹೋದರರು ದಿಃ 31-10-1986 ರಲ್ಲಿ ವಿಭಾಗ ಮಾಡಿಕೊಂಡ ಬಗ್ಗೆ

ನನಗೆ ಗೊತ್ತಿದೆ. ನಮ್ಮ ತಂದೆಯ ಜೀವಿತಾವಧಿಯಲ್ಲಿ ಅವರೇ ಮನೆ ನೋಡಿಕೊಳ್ಳುತ್ತಿದ್ದರು ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳು ಸರ್ಕಾರದವರು ನಿವೇಶನ ಕೊಟ್ಟಾಗಿನಿಂದಲೂ ಪ್ರತ್ಯೇಕವಾಗಿದ್ದಾರೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕುಟುಂಬದ ಯಜಮಾನನಾಗಿದ್ದ ಎಂದು ಸುಳ್ಳು ಹೇಳುತ್ತಿದ್ದಾನೆಂದರೆ ಸರಿಯಲ್ಲ. ನಮ್ಮ ತಂದೆಯ ಹಿಸ್ಸೆಗೆ ಬಂದ ಜಮೀನುಗಳು ಒಣ ಬೇಸಾಯ ಜಮೀನುಗಳು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕೋಡಿಹಳ್ಳಿ ಗ್ರಾಮದಲ್ಲಿ ಖರೀದಿಸಿದ ಜಮೀನಿನ ಸರ್ವೇ ನಂಬರ್ ಮತುತ ವಿಸ್ತೀರ್ಣ ನನಗೆ ಗೊತ್ತಿಲ್ಲ. ಆ ಜಮೀನನ್ನು ಖರೀದಿಸುವಾಗ ನಾನು ಹಾಜರಿರಲಿಲ್ಲ. 1 ನೇ ಪ್ರತಿವಾದಿ ಯಾರಿಂದ ಖರೀದಿಸಿದ್ದಾರೆಂದು ಮಾರಾಟಗಾರರ ಹೆಸರುನನಗ ಗೊತ್ತಿಲ್ಲ. ಯಾವ ದಿನಾಂಕಂದು ಖರೀದಿಸಿದ್ದಾರೆಂದು ನನಗೆ ನೆನಪಿಲ್ಲ. 1 ನೇ ಪ್ರತಿವಾದಿ ಖರೀದಿಸಿದ್ದ ಖರೀದಿ ಪತ್ರವನ್ನು ನಾನು ನೋಡಿದ್ದೇನೆ. ರೂ. 24 ಸಾವಿರ ರೂಗಳಿಗೆ ಎಕರೆಯಂತೆ ಖರೀದಿಸಿದ್ದಾರೆ . ಆ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ತಂದೆಯ ಹಿಸ್ಸೆಗೆ ಬಂದ ಸರ್ವೆ ನಂಃ 29/ಪಿ ಯಲ್ಲಿ 1 ಎಕರೆ 31 ಗುಂಟೆ ಜಮೀನನ್ನು ತಮ್ಮ ತಂದೆ , ವಾದಿ , 1 ನೇ ಪ್ರತಿವಾದಿ ಸೇರಿ ಮಾರಾಟ ಮಾಡಿದ್ದಾರೆಂದರೆ ಸರಿ . ಈಗಲೂ ವಾದಿಯ ಕುಟುಂಬದ ಕರ್ತನಾಗಿ 1 ನೇ ಪ್ರತಿವಾದಿ ನೋಡಿಕೊಳ್ಳುತ್ತಾನೆಂದು ಸುಳ್ಳು ಹೇಳುತ್ತಿದ್ದಾನೆಂದರೆ ಸರಿಯಲ್ಲ. ಕೋಡಿಹಳ್ಳಿ ಜಮೀನನ್ನು 1, 7 ಮತ್ತು 8 ನೇ ಪ್ರತಿವಾದಿಯರು ಹಂಚಿಕೆ ಮಾಡಿಕೊಂಡಿದ್ದಾರೆಂದರೆ ಸರಿ . ನಮ್ಮತಂದೆಯ ಹಿಸ್ಸೆಗೆ ಬಂದ ಆಸ್ತಿಗಳನ್ನು ವಾದಿ ಮತ್ತು 1 ನೇ ಪ್ರತಿವಾದಿ ವಿಭಾಗ ಮಾಡಿಕೊಂಡಿದ್ದರು ಎನ್ನುವುದು ಸರಿಯಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಸಂಧರ್ಬಕ್ಕೆ ತಕ್ಕಂತೆ ಬೇರೆ ಬೇರೆ ಇದ್ದಾರೆ ಎಂದು ಉತ್ತರಿಸುತ್ತಾರೆ. 23-24 ವರ್ಷಗಳಿಂದ ವಾದಿ ಮತ್ತು 1 ನೇ ಪ್ರತಿವಾದಿ ಬೇರೆ ಬೇರೆಯಾಗಿ ವಾಸವಾಗಿದ್ದಾರೆ. ನಮ್ಮ ತಂದೆಯಿಂದ ಬಂದ ಆಸ್ತಿಗಳನ್ನು ವಾದಿ ಮತ್ತು 1 ನೇ ಪ್ರತಿವಾದಿ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಾರೆನ್ನುವುದು ಸರಿಯಲ್ಲ. ಕೋಡಿ ಹಳ್ಳಿ ಜಮೀನು ಮತ್ತು ಸರ್ಕಾರದಿಂದ ಕೊಟ್ಟ ಜಾಗೆ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎನ್ನುವುದು ಸರಿಯಲ್ಲ. ಸದರಿ 2 ಆಸ್ತಿಗಳಲ್ಲಿ ನಮಗಾಗಲಿ ,ವಾದಿಗಾಗಲಿ ಹಿಸ್ಸೆ ಇರುವುದಿಲ್ಲ ಎನ್ನುವುದು ಸರಿಯಲ್ಲ. ನಾನು 5 ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಹುಟ್ಟಿದ ದಿನಾಂಕ ನೆನಪಿರುವುದಿಲ್ಲ. ನನ್ನ ತಾಯಿ 2015 ರಲ್ಲಿ ಮೃತ ಪಟ್ಟಿದ್ದಾರೆಂದರೆ ಸರಿ . ನನ್ನ ಮತ್ತು ರುದ್ರಮ್ಮನ ಮದುವೆ ಒಂದೇ ದಿನ ಆಗಿದೆ ಎಂದರೆ ಸರಿ . ನಿಡಿ- 60 ನಮ್ಮ ಮದುವೆಯ ಲಗ್ನ ಪತ್ರಿಕೆ ಎಂದರೆ ಸರಿ. ದಿಃ 30-07-1978 ರಂದು ಜನಿಸಿದ್ದೇನೆಂದರೆ ಸರಿ . 1 ನೇ ಪ್ರತಿವಾದಿ ಖರೀದಿಸಿದ ಕೋಡಿಹಳ್ಳಿ ಗ್ರಾಮದ ಜಮೀನು ಮತ್ತು ಸರ್ಕಾರದವರು ಕೊಟ್ಟ ನಿವೇಶನದಲ್ಲಿ ಪಾಲು ಬೇಕು ಎಂದು ಸುಳ್ಳು ಸಾಕ್ಷಿ ಹೇಳುತ್ತಿದೇನೆಂದರೆ ಸರಿಯಲ್ಲ. ನನಗೆ ವಯಸ್ಸಿಗೆ ಬಂದ ಮಗಳಿದ್ದಾಳೆಂದರೆ ಸರಿ . ಆಕೆಗೆ ಮದುವೆ ಆಗಿಲ್ಲ ಎಂದರೆ ಸರಿ . ನನ್ನ ಮಗಳ ಮದುವೆಯ ಸಲುವಾಗಿ 7 ನೇ ಪ್ರತಿವಾದಿ ಯ ಹತ್ತಿರ ಹಣ ಕೇಳಿದ್ದೇನೆಂದರೆ ಸರಿಯಲ್ಲ. ಆತನು ಹಣ ಕೊಡದೇ ಇರುವುದರಿಂದ ವಾದಿಯ ಪರವಾಗಿ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ವಿಷಯದ ಬಗ್ಗೆ ನನಗೆ ಮಾಹಿತಿ ಇದೆ. ನಾನೇ ಹೇಳಿ ಬರೆಸಿದ್ದೇನೆ. ನಾನು ಸುಳ್ಳು ಸಂಗತಿಯನ್ನು ಹೇಳಿ ಬರೆಸಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

SD/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.

ಅರ್ಜಿಯಲ್ಲಿ ಕೇಳಿದಂತೆ ನನ್ನ ಪರ ಆದೇಶ ಮಾಡಬೇಕೆಂದು ಪ್ರಾರ್ಥನೆ.

ಪಾಟೀ ಸವಾಲನ್ನು ವಾದಿಗಳ ಪರ ವಕೀಲರ ಕೋರಿಕೆಯ ಮೇರಗೆ ಮುಂದೂಡಲಾಯಿತು.

ಮುಖ್ಯ ವಿಚಾರಣೆಯನ್ನು ಅರ್ಜಿದಾರರ ಪರ ವಕೀಲರ ಕೋರಿಕೆಯ ಮೇರಗೆ ಮುಂದೂಡಲಾಯಿತು.

ಆದ್ದರಿಂದ ದಾವೆಯಲ್ಲಿ ಕೇಳಿದಂತೆ ನನ್ನ ಪರ ಡಿಕ್ರಿ ಮಾಡಬೇಕೆಂದು ಪ್ರಾರ್ಥನೆ ಅರ್ಜಿಯಲ್ಲಿ ಕೇಳಿದಂತೆ ನನ್ನ ಪರ ಆದೇಶ ಮಾಡಬೇಕೆಂದು ಪ್ರಾರ್ಥನೆಗಳು.